**<u>ದಿನಾಂಕಃ 10-03-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಂ ಡಿ ಎ ವಕೀಲರಿಂದಃ</u>**

1. ನಾನು ಬಿ ಕಾಂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಗಂಡ ಐ.ಟಿ.ಐ ವಿದ್ಯಾಭ್ಯಾಸ ಮಾಡಿರುತ್ತಾರೆ. ಎದುರುದಾರರು ನನ್ನ ಮದುವೆಗಿಂತ ಮೊದಲ ನನಗೆ ಸಂಬಂಧಿಕರಾಗಿದ್ದರು. ಎದುರುದಾರರು ನನ್ನ ಅಮ್ಮನ ಚಿಕ್ಕಪ್ಪನ ಮಗ ಎಂದರೆ ಸರಿ. ಮದುವೆಗಿಂತ ಮೊದಲು ಎದುರುದಾರರ ಮನೆಯ ಪರಿಸ್ಥಿತಿಯ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸಾಕ್ಷಿ ಅಷ್ಟಾಗಿ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ಎದುರುದಾರರ ತಂದೆ ಮತ್ತು ತಾಯಿ ಇಬ್ಬರೂ ಹಾರ್ಟ ಪೇಶೆಂಟ್ ಆಗಿರುತ್ತಾರೆ ಎಂದರೆ ಸರಿ. ನನ್ನ ಮದುವೆಯಾಗುವ ಕಾಲಕ್ಕೆ ಎದುರುದಾರರ ತಂದೆ ತಾಯಿ ಹೃದಯ ಶಸ್ತ್ರ ಚಿಕಿತ್ಸೆ ಆಗಿತ್ತು ಎಂದರೆ ಸರಿ. ಮದುವೆಯ ಕಾಲಕ್ಕೆ 7 ತೊಲಾ ಬಂಗಾರದ ಒಡವೆಗಳು , 2 ಲಕ್ಷ ರೂಪಾಯಿ ವರದಕ್ಷಿಣೆಯಾಗಿ ಕೊಟ್ಟಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವರದಕ್ಷಿಣೆ ಕೊಟ್ಟ ಬಗ್ಗೆ ಯಾವುದೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ.

2. ಎದುರುದಾರರ ಅಕ್ಕ ಹಾಗೂ ಅವರ ತಂದೆ ತಾಯಿ ಮಾತು ಕೇಳಿ ನನಗೆ ಹೊಡೆಯುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಗೆ ನಾನು ಒಬ್ಬಳೆ ಮಗಳಾಗಿದ್ದರಿಂದ ಇನ್ನು ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಎದುರುದಾರರು ನನಗೆ ಹೇಳುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾತ್ರಿ 10.00 -11 ಗಂಟೆಯಾದರೂ ಸಹ ಎದುರುದಾರರು ಮನೆಗೆ ಬರುತ್ತಿರಲಿಲ್ಲ ಮತ್ತು ನಾನು ಮಾಡಿದ ಅಡುಗೆಯನ್ನು ಊಟ ಮಾಡುತ್ತಿರಲಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮನೆಯಲ್ಲಿ ಅಡುಗೆಯನ್ನೆ ಮಾಡುತ್ತಿರಲಿಲ್ಲ ಮತ್ತು ನನಗೆ ಬೇಕಾಗಿದ್ದನ್ನು ನಾನು ಹೊರಗಿನಿಂದ ತರಿಸಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ.

2. ನನ್ನ ಗಂಡನಿಗೆ ಹಾರ್ಟ ಅಟ್ಯಾಕ್ ಆದ ವಿಚಾರ ನನಗೆ ಗೊತ್ತಿರುವುದಿಲ್ಲ. ಆಗ ನಾನು ತವರು ಮನೆಯಲ್ಲಿದ್ದೆ ಅವರ ಅಣ್ಣ ಮತ್ತು ಅಕ್ಕ ಹೋಗಿ ಎದುರುದಾರರಿಗೆ ಆಪರೇಶನ್ ಮಾಡಿಸಿಕೊಂಡು ಬಂದಿರುತ್ತಾರೆ. ದಿಃ 05-10-2023 ರಂದು ಎದುರುದಾರರಿಗೆ ಆಪರೇಶನ್ ಆಗಿದೆ ಎಂದರೆ ಸರಿ. ಎದುರುದಾರರು ಆಸ್ಪತ್ರೆಯಲ್ಲಿದ್ದಾಗ ನಾನು ಅವರನ್ನು ನೋಡಲು ಹೋಗಿರುವುದಿಲ್ಲ. ಎದುರುದಾರರು ಆಸ್ಪತ್ರೆಯಿಂದ ಬಂದ ನಂತರ ಅವರ ತಂದೆ ತಾಯಿ ಹಾಗೂ ಹಿರಿಯರು ನಮ್ಮ ಮನೆಗೆ ಬಂದು ನನಗೆ ಬುದ್ದಿ

ಹೇಳಿ ನನ್ನನ್ನು ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಎದುರುದಾರರಿಗೆ ಹಾಗೂ ಅವರ ತಂದೆ ತಾಯಿ ಪೇಶೆಂಟ್ ಇದ್ದು, ಅವರಿಗೆ ಅಡುಗೆ ಮಾಡಿ ಹಾಕಲು ನನಗೆ ಆಗುವುದಿಲ್ಲ ಎಂದು ನಾನು ಪದೆ ಪದೆ ಎದುರುದಾರರ ಜೊತೆ ಜಗಳ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಎದುರುದಾರರು ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವುದರಿಂದ ವೈದ್ಯರು ಯಾವುದೆ ಭಾರವಾದ ವಸ್ತುಗಳನ್ನು ಎತ್ತುವ ಕೆಲಸ ಮಾಡಬೇಡಿ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿ ಸ್ಮಾರ್ಟ ವರ್ಕ ಮಾಡಬಹುದು ಎಂದು ಹೇಳುತ್ತಾರೆ.

3. ಎದುರುದಾರರ ತಂದೆಗೆ 3 ಜನ ಮಕ್ಕಳು ಎಂದರೆ ಸರಿ. ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಗಳು ಎಂದರೆ ಸರಿ. ಹೆಣ್ಣು ಮಗಳನ್ನು ಕರೂರು ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆಕೆ ತವರು ಮನೆಯಲ್ಲೆ ಇರುತ್ತಾಳೆ ಎಂದು ಹೇಳುತ್ತಾರೆ. ಆಕೆ ಯಾವಾಗಲಾದರೂ ಒಮ್ಮೆ ತವರು ಮನಗೆ ಬಂದು ಹೋಗುತ್ತಾಳೆ ಎಂದರೆ ಸರಿಯಲ್ಲ. ಎದುರುದಾರರ ಮನೆಯಲ್ಲಿ ತಂದೆ ತಾಯಿ, ಅವರ ಅಣ್ಣ ಬಿಟ್ಟರೆ ಬೇರೆ ಯಾವುದೆ ಹೆಣ್ಣು ಮಕ್ಕಳು ಇಲ್ಲ ಎಂದರೆ ಸಾಕ್ಷಿ ಅವರ ಅಕ್ಕ ಇರುತ್ತಾರೆ ಎಂದು ಹೇಳುತ್ತಾರೆ. ಅವರ ಅಕ್ಕ ಗಂಡನ ಮನೆಯಲ್ಲಿ ಖಾಯಂ ಆಗಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ.

4. ನನ್ನ ಗಂಡ ತಿಂಗಳಿಗೆ ರೂ.50 ರಿಂದ 60 ಸಾವಿರ ದುಡಿಯುತ್ತಿದ್ದಾನೆ ಎನ್ನುವ ಬಗ್ಗೆ ಯಾವುದೆ ದಾಖಲೆ ಹಾಜರು ಪಡಿಸಿರುವುದಿಲ್ಲ. ನನ್ನ ಮಾವ ನಿವೃತ ಸರ್ಕಾರಿ ನೌಕರ ಎಂದರೆ ಸರಿ. ಅವರ ನಿವೃತ್ತಿ ಹಣದಲ್ಲಿ ಗಂಡ ಹೆಂಡತಿ ಜೀವನ ನಡೆಸುತ್ತಿದ್ದಾರೆ ಎಂದರೆ ಸರಿ. ನನ್ನ ಗಂಡ ತಂದೆ ತಾಯಿಗೆ ವಯಸ್ಸಾಗಿದ್ದರಿಂದ ನನ್ನ ಗಂಡನೆ ಅವರ ಜೋಪಾನ ಜತನ ಮಾಡಿಕೊಂಡು ಅವರ ಜೊತೆ ವಾಸವಾಗಿರುತ್ತಾರೆ ಎಂದರೆ ಸರಿ. ನನ್ನ ಮಾವ ನೌಕರಿ ಮಾಡುತ್ತಿದ್ದಾಗ ದುಡಿದು ಕಟ್ಟಿಸಿದ ಮನೆಯಾಗಿದ್ದು ಅದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಅದೆ ಮನೆಯಲ್ಲಿ ನನ್ನ ಗಂಡನು ಸಹ ವಾಸವಾಗಿರುತ್ತಾನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮನೆಯನ್ನು ನನ್ನ ಗಂಡನ ಹೆಸರಿಗೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಗಂಡನ ಹೆಸರಿಗೆ ಮನೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನನ್ನ ಗಂಡ ಬೈಕ್ ಅಡವಿಟ್ಟಿದ್ದು ಅದನ್ನು ಸಹ ನನ್ನ ತಂದೆಯೇ ಬಿಡಿಸಿಕೊಟ್ಟಿರುತ್ತಾರೆ ಎನ್ನುವ ಬಗ್ಗೆ ಯಾವುದೆ ದಾಖಲಾತಿ ಇರುವುದಿಲ್ಲ. ದಿಃ 02-05-2024 ರಂದು ನನ್ನ ಗಂಡನ ಅಕ್ಕನ ಮಗ ನನ್ನನ್ನು ತವರು ಮನೆಗೆ ತಂದು ಬಿಟ್ಟುಹೋಗಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೇ ಸ್ವಬುದ್ದಿಯಿಂದ ಎದುರುದಾರರ ಮನೆಯನ್ನು ಬಿಟ್ಟು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಂತರ ಎದುರುದಾರರು ನನಗೆ ನನ್ನ ಜೊತೆ ಜೀವನ ನಡೆಸಲು ಬಾ ಎಂದು ನೋಟಿಸು ಕೊಟ್ಟಿದ್ದರು ಎಂದರೆ ಸರಿ. ಆ

ನೋಟಿಸಿಗೆ ಉತ್ತರ ಕೊಟ್ಟು ಆ ನಂತರ ಈ ಜೀವನಾಂಶದ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

6. ಇವತ್ತಿಗೂ ಸಹ ನನ್ನ ಗಂಡ ನನ್ನ ಜೊತೆ ಜೀವನ ನಡೆಸಲು ತಯಾರಿರುತ್ತಾನೆ ಎಂದರೆ ಸರಿಯಲ್ಲ. ನಾನೇ ಅವನಿಂದ ದೂರ ಹೋಗುತ್ತಿದ್ದೆ ಎಂದರೆ ಸರಿಯಲ್ಲ. ಮದುವೆಯಾಗಿ 6 ತಿಂಗಳಲ್ಲಿ ನನ್ನ ಗಂಡನಿಗೆ ಹಾರ್ಟ ಆಪರೇಶನ್ ಆಗಿದ್ದರಿಂದ ನನ್ನ ಜೀವನ ಹಾಳಾಗುತ್ತದೆ ಎಂದು ಆತನಿಗೆ ಡೈವರ್ಸ ಕೊಡಬೇಕು ಎಂದು ನಾನೆ ಅವನನ್ನು ಬಿಟ್ಟು ಬಂದಿರುತ್ತೇನೆ ಎಂದರೆ ಸರಿಯಲ್ಲ.

7. ನಿಪಿ–6 ಆರ್ ಟಿ ಸಿಯಲ್ಲಿರುವ ಜಮೀನು ಮಳೆಯಾಶ್ರಿತ ಜಮೀನು ಎಂದರೆ ಸರಿ. ನನ್ನ ಗಂಡನಾಗಲಿ ಅವರ ತಂದೆಯಾಗಲಿ ಯಾವುದೆ ಕೃಷಿ ಮಾಡುವುದಿಲ್ಲ ಎಂದರೆ ಸಾಕ್ಷಿ ಅವರ ಚಿಕ್ಕಪ್ಪನ ಮಗನಿಗೆ ಜಮೀನು ಮಾಡಲು ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಜಮೀನಿನಲ್ಲಿ ಯಾವುದೆ ಬೆಳೆ ಬರದ ಕಾರಣ ಎದುರುದಾರರು ಯಾವುದೆ ಕೃಷಿ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಿಪಿ–7 ರಿಂದ 9 ಎಸ್ಟಿಮೇಟ್ ಆಗಿದ್ದು ರಶೀದಿ ಅಲ್ಲ ಎಂದರೆ ಸರಿಯಲ್ಲ. ನಿಪಿ–7 ರಿಂದ 9 ರಲ್ಲಿ ಬಂಗಾರ ಖರೀದಿ ಮಾಡಿದ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ವಿಜಯಲಕ್ಷ್ಮಿ ಜ್ಯುವೆಲರಿ ನಮ್ಮ ತಂದೆಯ ಊರಿನದು ಎಂದರೆ ಸರಿ. ನಮ್ಮ ತಂದೆಯವರ ಊರಿನವರಾಗಿದ್ದರಿಂದ ಸುಳ್ಳು ರಶೀದಿ ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–7 ರಿಂದ 9 ಮತ್ತು 12 ಜಿ ಎಸ್ ಟಿ ಬಿಲ್ ಗಳಲ್ಲ ಎಂದರೆ ಸರಿಯಲ್ಲ. ಎದುರುದಾರರಿಂದ ಹೆಚ್ಚಿನ ಹಣ ಜೀವನಾಂಶವಾಗಿ ಪಡೆಯಬೇಕು ಎಂದು ನಾನು ಮತ್ತು ನನ್ನ ತಂದೆ ಈ ಎಲ್ಲಾ ದಾಖಲೆಗಳನ್ನು ಸೃಷ್ಠಿ ಮಾಡಿ ತಂದು ಹಾಜರು ಪಡಿಸಿರುತ್ತೇವೆ ಎಂದರೆ ಸರಿಯಲ್ಲ.

8. ನನ್ನ ತಂದೆ ನಿವೃತ್ತ ನೌಕರ ಎಂದರೆ ಸರಿ. ನನ್ನ ತಂದಗೆ ನಾನು ಒಬ್ಬಳೆ ಮಗಳು ಹಾಗೂ ಒಬ್ಬ ಮಗ ಇರುತ್ತಾನೆ ಎಂದರೆ ಸರಿ. ನನ್ನ ತಂದೆ ನಿವೃತ್ತ ನೌಕರರಾಗಿರುವುದರಿಂದ ಮನೆಯ ಕಡೆ ಅನುಕೂಲಸ್ಥರಾಗಿರುತ್ತೇವೆ ಎಂದರೆ ಸಾಕ್ಷಿ ಒಂದು ಲೆಕ್ಕಕ್ಕೆ ಇರುತ್ತೇವೆ ಎಂದು ಹೇಳುತ್ತಾರೆ. ನಾನು ಅನುಕೂಲಸ್ಥರಾಗಿರುವುದರಿಂದ ಎದುರುದಾರರ ಚಾಕರಿ ಏಕೆ ಮಾಡಬೇಕು ಎಂದು ನಾನು ಅವರನ್ನು ಯಾವುದೆ ಕಾರಣ ಇಲ್ಲದೆ ತೊರೆದು ಬಂದು ಜೀವನಾಂಶಕ್ಕಾಗಿ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಎದುರುದಾರರ ತಾಯಿಯ ಚಾಕರಿ ಮಾಡದ ಕಾರಣ ಎದುರುದಾರರ ಅಕ್ಕ ಮನೆಗೆ ಬಂದು ಸ್ನಾನ ಮಾಡಿಸಿ ಚಾಕರಿ ಮಾಡಿ ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡಬೇಕು ಎಂದು ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಏನೂ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/–

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.